ಸಂಪುಟ: 11 ಸಂಚಿಕೆ: 175 ಪುಟ: 4+2 ಬೆಲೆ : 3.00 ಶನಿವಾರ, ಆಗಸ್ಟ್ 15, 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 175 Pages : 4+2 Rate : 3.00 Saturday, August 15, 2026 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2020-22

### ಎಚ್.ಕೆ. ಪಾಟೀಲ ಸೇವಾ ತಂಡದ ನಾಲ್ಕು ವರ್ಷದ ಜನಪರ ಆರೋಗ್ಯಯಾನ

# ಕಣ್ಣಿಗೆ ಬೆಳಕು... ಹೃದಯಕ್ಕೆ ಬಲ... ಬದುಕಿಗೆ ಭರವಸೆ!

**ವಿಜಯಸಾಕ್ಷಿ ಸುದ್ದಿ, ಗದಗ**

ಚಿಕಿತ್ಸೆ ಬೇಕು... ಆದರೆ ಹಣವಿಲ್ಲ. ಆಸ್ಪತ್ರೆಯ ಬಾಗಿಲಿಗೆ ಬಂದರೂ ದುಬಾರಿ ಚಿಕಿತ್ಸೆಯ ಚಿಂತೆ. ಇಂತಹ ಸಂಕಷ್ಟದಲ್ಲಿರುವ ಬಡವರು ಮತ್ತು ಅಗತ್ಯವಿರುವವರ ಪಾಲಿಗೆ ನೆರವಿನ ಹಸ್ತ ಚಾಚುತ್ತಾ, ಕಳೆದ ಕೆಲವು ವರ್ಷಗಳಿಂದ ಆರೋಗ್ಯ ಸೇವೆಯ ಮೂಲಕ ಜನರ ಬದುಕಿಗೆ ಆಸರೆಯಾಗುತ್ತಿದೆ ಎಚ್.ಕೆ. ಪಾಟೀಲ ಸೇವಾ ತಂಡ.

2022ರ ಆಗಸ್ಟ್ 15ರಂದು ಸ್ಥಾಪನೆಯಾದ ಸೇವಾ ತಂಡ, ಆರಂಭದಿಂದಲೂ ಆರೋಗ್ಯ ಸೇವೆಗೆ ವಿಶೇಷ ಆದ್ಯತೆ ನೀಡಿದೆ. ಕೇವಲ ಒಂದು ಕಾರ್ಯಕ್ರಮಕ್ಕೆ ಸೀಮಿತವಾಗದೆ, ಅಗತ್ಯವಿರುವವರ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಸಾಧ್ಯವಾದಷ್ಟು ಚಿಕಿತ್ಸಾ ನೆರವು ಒದಗಿಸುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ.

**ಸಾವಿರಾರು ಕಣ್ಣುಗಳಿಗೆ ಬೆಳಕು**

ಸೇವಾ ತಂಡದ ಪ್ರಮುಖ ಸೇವಾ ಕಾರ್ಯಗಳಲ್ಲಿ ಕಣ್ಣಿನ ಚಿಕಿತ್ಸೆಯೂ ಒಂದು. ಇದುವರೆಗೆ 3,700ಕ್ಕೂ ಹೆಚ್ಚು ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಳಿಗೆ ನೆರವು ನೀಡಲಾಗಿದೆ. ಇದರ ಜತೆಗೆ ಸುಮಾರು 40 ಸಾವಿರ ಜನರಿಗೆ ಕಣ್ಣಿನ ತಪಾಸಣೆ ನಡೆಸಿ, ಅಗತ್ಯವಿರುವ 15 ಸಾವಿರ ಜನರಿಗೆ ಚಶ್ಮಾ ವಿತರಿಸಲಾಗಿದೆ.

ಒಬ್ಬರ ದೃಷ್ಟಿ ಮರಳುವುದು ಎಂದರೆ ಕೇವಲ ಕಣ್ಣುಗಳಿಗೆ ಬೆಳಕು ಬಂದಂತಲ್ಲ; ಅವರ ಬದುಕಿನಲ್ಲೇ ಹೊಸ ಭರವಸೆ ಮೂಡಿದಂತೆ. ಈ ನಿಟ್ಟಿನಲ್ಲಿ ಸೇವಾ ತಂಡದ ಕಣ್ಣಿನ ಆರೋಗ್ಯ ಕಾರ್ಯಕ್ರಮಗಳು ಗಮನಾರ್ಹವಾಗಿವೆ.

**ಗಂಭೀರ ಚಿಕಿತ್ಸೆಗಳಿಗೂ ನೆರವಿನ ಹಸ್ತ**

ಆರೋಗ್ಯ ಸಮಸ್ಯೆಗಳು ಕೇವಲ ಸಣ್ಣಪುಟ್ಟ ಕಾಯಿಲೆಗಳಿಗೆ ಸೀಮಿತವಾಗಿರುವುದಿಲ್ಲ. ಕಿಡ್ನಿ ಕಸಿ, ಹೃದಯ ಚಿಕಿತ್ಸೆ, ಮೊಣಕಾಲು ಶಸ್ತ್ರಚಿಕಿತ್ಸೆಯಂತಹ ದುಬಾರಿ ಚಿಕಿತ್ಸೆಗಳು ಬಡ ಕುಟುಂಬಗಳಿಗೆ ದೊಡ್ಡ ಆರ್ಥಿಕ ಹೊರೆ. ಇಂತಹ ಸಂದರ್ಭಗಳಲ್ಲಿಯೂ ಸೇವಾ ತಂಡ ನೆರವಿಗೆ ನಿಂತಿದೆ.

ಇದುವರೆಗೆ 2 ಕಿಡ್ನಿ ಕಸಿ, 26 ಮೊಣಕಾಲು ಚಿಪ್ಪು ಜೋಡಣೆ (Total Knee/Joint Replacement), 75 ಹೃದಯಕ್ಕೆ ಸ್ಟಂಟ್ ಹಾಗೂ 15 ಓಪನ್ ಹಾರ್ಟ್ ಸರ್ಜರಿಗಳಿಗೆ ನೆರವು ನೀಡಲಾಗಿದೆ.

**ಸೇವೆಯ ಅಂಕಿಅಂಶಗಳು ಹೇಳುವ ಕಥೆ**

1) 3,700+ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ
2) 75 ಹೃದಯಕ್ಕೆ ಸ್ಟಂಟ್
3) 26 ಮೊಣಕಾಲು ಚಿಪ್ಪು ಜೋಡಣೆ
4) 15 ಓಪನ್ ಹಾರ್ಟ್ ಸರ್ಜರಿ
5) 2 ಕಿಡ್ನಿ ಕಸಿ
6) 40,000 ಜನರಿಗೆ ಕಣ್ಣಿನ ತಪಾಸಣೆ
7) 15,000 ಜನರಿಗೆ ಚಶ್ಮಾ ವಿತರಣೆ

ಈ ಅಂಕಿ–ಅಂಶಗಳು ಕೇವಲ ಸಂಖ್ಯೆಗಳಲ್ಲ. ಪ್ರತಿಯೊಂದು ಸಂಖ್ಯೆಯ ಹಿಂದೆ ಒಂದು ಕುಟುಂಬ, ಒಂದು ನೋವು, ಒಂದು ನಿರೀಕ್ಷೆ ಹಾಗೂ ನೆರವು ದೊರೆತ ಬಳಿಕ ಮೂಡಿದ ಭರವಸೆಯ ಕಥೆಯಿದೆ.

ದುಬಾರಿ ಚಿಕಿತ್ಸೆಯ ಕಾರಣದಿಂದಾಗಿ ಕುಟುಂಬದ ಆರ್ಥಿಕ ಸ್ಥಿತಿ ಕುಸಿಯದಂತೆ, ಅಗತ್ಯವಿರುವವರಿಗೆ ಚಿಕಿತ್ಸಾ ನೆರವು ತಲುಪಿಸುವುದು ಸೇವಾ ತಂಡದ ಕಾರ್ಯವೈಖರಿಯ ಪ್ರಮುಖ ಅಂಶವಾಗಿದೆ. ಆರೋಗ್ಯ ಸೇವೆ ಎಲ್ಲರಿಗೂ ತಲುಪಬೇಕು ಎಂಬ ಆಶಯದೊಂದಿಗೆ ತಂಡ ವಿವಿಧ ಆರೋಗ್ಯ ಸೇವಾ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ.

ಕಣ್ಣಿನ ತಪಾಸಣೆಯಿಂದ ಆರಂಭಿಸಿ ಚಶ್ಮಾ ವಿತರಣೆ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಕಿಡ್ನಿ ಕಸಿ, ಮೊಣಕಾಲು ಜೋಡಣೆ, ಹೃದಯಕ್ಕೆ ಸ್ಟಂಟ್ ಹಾಗೂ ಓಪನ್ ಹಾರ್ಟ್ ಸರ್ಜರಿಗಳವರೆಗೆಎಚ್.ಕೆ. ಪಾಟೀಲ ಸೇವಾ ತಂಡದ ಸೇವೆಯ ವ್ಯಾಪ್ತಿ ವಿಸ್ತಾರವಾಗಿದೆ.

ಆರೋಗ್ಯದ ಸಂಕಷ್ಟ ಎದುರಿಸುತ್ತಿರುವವರ ಪಾಲಿಗೆ ನೆರವಾಗುವುದು, ಚಿಕಿತ್ಸೆ ಪಡೆಯಲು ಸಾಧ್ಯವಾಗದವರಿಗೆ ಕೈಹಿಡಿಯುವುದು ಹಾಗೂ ಬಡವರ ಬದುಕಿನಲ್ಲಿ ಭರವಸೆ ಮೂಡಿಸುವುದುಇದೇ ಸೇವಾ ತಂಡದ ಕಾರ್ಯದ ಮೂಲ ಆಶಯ.







**: ಲಭ್ಯವಿರುವ ಸೇವೆಗಳು :**

- ಆರೋಗ್ಯ ಕಾರ್ಡ
- ಕಣ್ಣಿನ ತಪಾಸಣೆ
- ಹೃದಯ ಬೇನೆ
- ಪಡಿತರ ಚೀಟಿ
- ಶೈಕ್ಷಣಿಕ
- ಕಾರ್ಮಿಕ ಕಾರ್ಡ
- ವೃದ್ಧಾಪ್ಯ ವೇತನ
- ಜಾತಿ, ಆದಾಯ ರಹವಾಸಿ ಪತ್ರ
- ಅಂಗವಿಕಲರ ವೇತನ
- ಕೃತಕ ಕಾಲು ಜೋಡಣೆ
- ಕ್ರೀಡಾಪಟುಗಳು
- ಕಲೆ,ಸಂಗೀತ,ಸಾಹಿತ್ಯ
- ಆಧಾರ ಕಾರ್ಡ
- ನಗರಸಭೆ ಕರಪತ್ರ, ಪಹಣಿ
- ಶಾಲೆಯ ದಾಖಲಾತಿ
- ವಿಶೇಷ ನಾಗರಿಕರು
- ಬ್ಯಾಂಕ ಖಾತೆ
- ಮೊಣಕಾಲು ಚಿಪ್ಪು ಜೋಡಣೆ
- ಮೂತ್ರಪಿಂಡ ಬದಲಾವಣೆ
- ರಕ್ತದಾನ
- ನಶೆಮುಕ್ತ ಅಭಿಯಾನ
- ಅಂಗಾಂಗ ದಾನ
- ಮಹಿಳೆಯರಿಗೆ ಹೊಲಿಗೆ ಯಂತ್ರ ತರಬೇತಿ
- ಇತರೆ

ನಿಮ್ಮ ಕನಸುಗಳು, ನಮ್ಮ ಸೇವೆಗಳ ಮೂಲಕ ನನಸಾಗಲಿ

### ₹9.42 ಕೋಟಿ ವೆಚ್ಚದ ಕ್ಯಾಥ್‌ಲ್ಯಾಬ್; ಬಡವರಿಗೂ ಅತ್ಯಾಧುನಿಕ ಹೃದಯ ಚಿಕಿತ್ಸೆ

# ಗದಗದಲ್ಲೇ ಹೃದಯಕ್ಕೆ ಹೊಸ ಭರವಸೆ!

**ವಿಜಯಸಾಕ್ಷಿ ಸುದ್ದಿ, ಗದಗ**

ಗಂಭೀರ ಹೃದಯ ಕಾಯಿಲೆ ಎಂದರೆ ಚಿಕಿತ್ಸೆಗಾಗಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಅಥವಾ ಬೆಂಗಳೂರಿನತ್ತ ಮುಖ ಮಾಡಬೇಕಿದ್ದ ಕಾಲ ಬದಲಾಗುತ್ತಿದೆ.

ಗದಗದ ಮಲ್ಲಸಮುದ್ರದಲ್ಲಿರುವ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಸ್ಥಾಪಿಸಲಾದ ಹೃದಯ ಆರೈಕೆ ಸೂಪರ್ ಸ್ಪೆಷಾಲಿಟಿ ಘಟಕ ಹಾಗೂ ಕ್ಯಾಥ್ ಲ್ಯಾಬ್, ಜಿಲ್ಲೆಯ ಆರೋಗ್ಯ ಸೇವೆಯಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ.

ಗದಗ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಅತ್ಯಾಧುನಿಕ ಹೃದಯ ಚಿಕಿತ್ಸೆ ತಮ್ಮದೇ ಜಿಲ್ಲೆಯಲ್ಲಿ ದೊರೆಯಬೇಕು ಎಂಬ ದೂರದೃಷ್ಟಿಯೊಂದಿಗೆ ಯೋಜನೆ ರೂಪುಗೊಂಡಿದ್ದು, ಇದರ ಸಾಕಾರದಲ್ಲಿ ಈ ಹಿಂದೆ ಗದಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಾ. ಎಚ್.ಕೆ. ಪಾಟೀಲರ ವಿಶೇಷ ಕಾಳಜಿ, ನಿರಂತರ ಪ್ರಯತ್ನ ಹಾಗೂ ಮಾರ್ಗದರ್ಶನ ಪ್ರಮುಖ ಪಾತ್ರ ವಹಿಸಿದೆ.

2023ರ ನವೆಂಬರ್ 3ರಂದು ಮುಖ್ಯಮಂತ್ರಿಗಳಿಂದ, ಡಾ. ಎಚ್.ಕೆ. ಪಾಟೀಲರ ಉಪಸ್ಥಿತಿಯಲ್ಲಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಸುಮಾರು ₹9.42 ಕೋಟಿ ವೆಚ್ಚದ ಯೋಜನೆ ಕೇವಲ ಕಟ್ಟಡ ನಿರ್ಮಾಣಕ್ಕೆ ಸೀಮಿತವಾಗದೆ, ಅಗತ್ಯ ವೈದ್ಯಕೀಯ ಉಪಕರಣಗಳು ಹಾಗೂ ತಜ್ಞ ವೈದ್ಯಕೀಯ ಸೇವೆಗಳೊಂದಿಗೆ ಬಲಪಡಿಸಲಾಯಿತು. 2025ರ ಫೆಬ್ರವರಿ 15ರಿಂದ ಕ್ಯಾಥ್‌ಲ್ಯಾಬ್ ಕಾರ್ಯಾರಂಭ ಮಾಡಿದ್ದು, ಅಲ್ಪಾವಧಿಯಲ್ಲಿಯೇ ಗದಗ ಭಾಗದ ಪ್ರಮುಖ ಹೃದಯ ಚಿಕಿತ್ಸಾ ಕೇಂದ್ರವಾಗಿ ಬೆಳೆಯುತ್ತಿದೆ.

ಕ್ಯಾಥ್‌ಲ್ಯಾಬ್‌ನಲ್ಲಿ ಇದುವರೆಗೆ 728 ವೈದ್ಯಕೀಯ ಪ್ರಕ್ರಿಯೆಗಳು ನಡೆದಿವೆ. ಕೊರೊನರಿ ಆಂಜಿಯೋಗ್ರಫಿ, ಆಂಜಿಯೋಪ್ಲಾಸ್ಟಿ, ಪೇಸ್ ಮೇಕರ್ ಸೇರಿದಂತೆ ಹಲವು ಅತ್ಯಾಧುನಿಕ ಹೃದಯ ಚಿಕಿತ್ಸೆಗಳು ಇಲ್ಲಿ ಲಭ್ಯವಾಗುತ್ತಿವೆ.

**ಕ್ಯಾಥ್‌ಲ್ಯಾಬ್ ಸೇವೆಯ ಅಂಕಿಅಂಶ**

| | |
|---|---|
| 728 | ಒಟ್ಟು ಪ್ರಕ್ರಿಯೆಗಳು |
| 612 | ಕೊರೊನರಿ ಆಂಜಿಯೋಗ್ರಫಿ (CAG) |
| 349 | ಕೊರೊನರಿ ಆಂಜಿಯೋಪ್ಲಾಸ್ಟಿ (PTCA) |
| 15 | ಪೇಸ್‌ಮೇಕರ್ / VVI / DDR |
| 1 | CRTD |
| 3 | IVI |
| 1 | ASD Intervention |
| 1 | TAVI |

**ಬಡವರ ಪಾಲಿಗೆ ಹೃದಯದ ಆಸ್ಪತ್ರೆ**

ಈ ಘಟಕದ ದೊಡ್ಡ ಸಾಮಾಜಿಕ ಕೊಡುಗೆ ಎಂದರೆ ಅರ್ಹ ಬಿಪಿಎಲ್ ರೋಗಿಗಳಿಗೆ ಉಚಿತ ಹೃದಯ ಚಿಕಿತ್ಸಾ ಸೇವೆ ದೊರೆಯುತ್ತಿರುವುದು. ಖಾಸಗಿ ಆಸ್ಪತ್ರೆಗಳಲ್ಲಿ ದೊಡ್ಡ ಮೊತ್ತದ ವೆಚ್ಚವಾಗಬಹುದಾದ ಆಂಜಿಯೋಗ್ರಫಿ, ಆಂಜಿಯೋಪ್ಲಾಸ್ಟಿ, ಪೇಸ್‌ಮೇಕರ್ ಸೇರಿದಂತೆ ವಿವಿಧ ಚಿಕಿತ್ಸೆಗಳು ಅಗತ್ಯವಿರುವ ಬಡ ರೋಗಿಗಳಿಗೆ ಗದಗದಲ್ಲಿಯೇ ದೊರೆಯುತ್ತಿವೆ.

ಇದಕ್ಕೆ ಗಮನಾರ್ಹ ಉದಾಹರಣೆಯಾಗಿ, ಸುಮಾರು ₹23 ಲಕ್ಷ ಮೌಲ್ಯದ TAVI (Transcatheter Aortic Valve Implantation) ಚಿಕಿತ್ಸೆಯನ್ನು ಖಇಕಖುಖಕ ಯೋಜನೆಯಡಿ ಸಂಪೂರ್ಣ ಉಚಿತವಾಗಿ ಯಶಸ್ವಿಯಾಗಿ ನೆರವೇರಿಸಲಾಗಿದೆ.

ಅತ್ಯಾಧುನಿಕ ತಂತ್ರಜ್ಞಾನದ ಈ ದುಬಾರಿ ಚಿಕಿತ್ಸೆಯನ್ನು ಬಡ ರೋಗಿಗೆ ಉಚಿತವಾಗಿ ಒದಗಿಸಿರುವುದು ಗದಗದ ಸರ್ಕಾರಿ ಆರೋಗ್ಯ ವ್ಯವಸ್ಥೆಯ ಮಹತ್ವದ ಸಾಧನೆಯಾಗಿದೆ.

ಹಿಂದೆ ತುರ್ತು ಹೃದಯ ಚಿಕಿತ್ಸೆಗೆ ದೂರದ ನಗರಗಳಿಗೆ ತೆರಳಬೇಕಾಗಿದ್ದ ರೋಗಿಗಳಿಗೆ ಈಗ ಗದಗದಲ್ಲಿಯೇ ಹಲವು ಅತ್ಯಾಧುನಿಕ ಚಿಕಿತ್ಸೆಗಳು ಲಭ್ಯವಾಗುತ್ತಿವೆ. CAG, PTCA, ಪೇಸ್‌ಮೇಕರ್, CRTD, ASD Intervention ಹಾಗೂ TAVI ಸೇರಿದಂತೆ ವಿವಿಧ ಚಿಕಿತ್ಸಾ ಸೌಲಭ್ಯಗಳು ಜಿಲ್ಲೆಯ ಜನರ ಆರೋಗ್ಯ ಸೇವೆಗೆ ದೊಡ್ಡ ಆಸರೆಯಾಗಿವೆ.

ಇದರ ಹಿಂದೆ ಯೋಜನೆಯನ್ನು ರೂಪಿಸುವುದರಿಂದ ಹಿಡಿದು ಕ್ಯಾಥ್‌ಲ್ಯಾಬ್ ಕಾರ್ಯಾರಂಭ ಹಾಗೂ ಅದರ ನಿರಂತರ ಬಲವರ್ಧನೆಯವರೆಗೆ ಡಾ. ಎಚ್.ಕೆ. ಪಾಟೀಲರು ತೋರಿಸುತ್ತಿರುವ ಕಾಳಜಿ ಗಮನಾರ್ಹವಾಗಿದೆ.

ಬಡವರ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಿಂದ ಹಿಡಿದು ಹೃದಯ ಚಿಕಿತ್ಸೆಯವರೆಗೆ ನೆರವು ನೀಡುತ್ತಿರುವ ಎಚ್.ಕೆ. ಪಾಟೀಲ ಸೇವಾ ತಂಡದ ಜನಪರ ಆರೋಗ್ಯ ಕಾಳಜಿಗೆ, ಗದಗದಲ್ಲೇ ಅತ್ಯಾಧುನಿಕ ಹೃದಯ ಚಿಕಿತ್ಸಾ ವ್ಯವಸ್ಥೆ ಲಭ್ಯವಾಗಿರುವುದು ಮತ್ತೊಂದು ಮಹತ್ವದ ಸೇರ್ಪಡೆಯಾಗಿದೆ.

ಹಣದ ಕೊರತೆಯಿಂದ ಚಿಕಿತ್ಸೆ ವಂಚಿತರಾಗಬಾರದು; ಅಗತ್ಯವಿರುವವರಿಗೆ ಅತ್ಯಾಧುನಿಕ ಆರೋಗ್ಯ ಸೇವೆ ತಮ್ಮದೇ ಜಿಲ್ಲೆಯಲ್ಲಿ ದೊರೆಯಬೇಕು ಎಂಬ ಆಶಯಕ್ಕೆ ಕ್ಯಾಥ್‌ಲ್ಯಾಬ್ ಕಾರ್ಯರೂಪದ ರೂಪ ನೀಡುತ್ತಿದೆ.

ಗದಗದ ಆರೋಗ್ಯ ಸೇವೆಯ ಪಯಣದಲ್ಲಿ ಇದು ಕೇವಲ ಒಂದು ಕಟ್ಟಡ ಅಥವಾ ಒಂದು ವೈದ್ಯಕೀಯ ಘಟಕವಲ್ಲ, ಅಗತ್ಯವಿರುವವರ ಹೃದಯಕ್ಕೆ ಭರವಸೆ ತುಂಬುವ ಆರೋಗ್ಯ ಸೇವೆಯ ಹೊಸ ಬಾಗಿಲು.

### ತಂಡದ ನಾಯಕರೇ ಕಮಾಂಡೋಗಳು; ಸಮಸ್ಯೆಗಳ ದಾಖಲೆ, ಪ್ರಶ್ನೆ ಉತ್ತರದ ಮೂಲಕ ಅಭಿವೃದ್ಧಿಗೆ ಒತ್ತು

# ಗದಗದ ಅಭಿವೃದ್ಧಿಗೆ ಬೀದಿ ಬೀದಿಯಲ್ಲಿ GEN Z ಸೈನಿಕರು




**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರದ ಅಭಿವೃದ್ಧಿ, ಮೂಲಸೌಕರ್ಯ ಸಮಸ್ಯೆಗಳು ಹಾಗೂ ಗ್ರಾಮೀಣ ಭಾಗಗಳ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಮತ್ತು ಆಡಳಿತದ ಗಮನಕ್ಕೆ ತರುವ ಉದ್ದೇಶದಿಂದ GEN Z Voters Citizens Forum ಹೊಸ ಮಾದರಿಯ ಜನಜಾಗೃತಿ ಅಭಿಯಾನಕ್ಕೆ ಮುಂದಾಗಿದೆ.

ನಗರದ ಪ್ರತಿಯೊಂದು ರಸ್ತೆ, ಬಡಾವಣೆ, ವಾರ್ಡ್ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ GEN Z ಯುವಕರು ಅಭಿವೃದ್ಧಿಯ ಸೈನಿಕರುಟಿ ಆಗಿ ಕಾರ್ಯನಿರ್ವಹಿಸಲಿದ್ದು, ಪ್ರತಿ ತಂಡವನ್ನು ಮುನ್ನಡೆಸುವ ಯುವ ನಾಯಕರು ಟೀಮ್ ಲೀಡರ್ ಕಮಾಂಡೋಟಿಗಳಾಗಿ ಜವಾಬ್ದಾರಿ ವಹಿಸಲಿದ್ದಾರೆ.

ಹಾಳಾದ ರಸ್ತೆಗಳು, ಅವ್ಯವಸ್ಥೆಯ ಚರಂಡಿಗಳು, ಕುಡಿಯುವ ನೀರಿನ ಸಮಸ್ಯೆ, ಕಸದ ರಾಶಿ, ಬೀದಿ ದೀಪಗಳ ಕೊರತೆ, ಅಪೂರ್ಣ ಕಾಮಗಾರಿಗಳು ಹಾಗೂ ಸಾರ್ವಜನಿಕ ಸೌಲಭ್ಯಗಳ ಕೊರತೆ ಸೇರಿದಂತೆ ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ ಸಮಸ್ಯೆಗಳನ್ನು ಯುವಕರು ಫೋಟೊ ಮತ್ತು ವಿಡಿಯೊಗಳ ಮೂಲಕ ಸ್ಥಳ ಹಾಗೂ ದಿನಾಂಕದೊಂದಿಗೆ ದಾಖಲಿಸಲಿದ್ದಾರೆ. ಈ ದಾಖಲೆಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಜನರ ಗಮನಕ್ಕೆ ತರುವುದರ ಜತೆಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಗಮನಕ್ಕೂ ತರಲಾಗುವುದು.

▶▶ 3



### ಶ್ರಮ, ಸಾಧನೆ, ಸೇವೆಯ ಮೂಲಕ ಗದಗದ ಉದ್ಯಮ ಲೋಕಕ್ಕೆ ಹೊಸ ಗುರುತು ನೀಡಿದ ಸಾಧಕರಿಗೆ ಗದಗ ಉತ್ಸವದಲ್ಲಿ ಗೌರವ

# ಸಣ್ಣ ಅಂಗಡಿಯಿಂದ ಉದ್ಯಮ ಸಾಮ್ರಾಜ್ಯದವರೆಗೆ...!












ಒಂದು ಸಣ್ಣ ಅಂಗಡಿ... ಅಲ್ಪ ಬಂಡವಾಳ... ಆದರೆ ದೊಡ್ಡ ಕನಸು. ಅಲ್ಲಿಂದ ಆರಂಭವಾದ ವ್ಯಾಪಾರ ಇಂದು ಸಂಸ್ಕರಣಾ ಘಟಕ, ಬೃಹತ್ ಮಳಿಗೆ, ಉತ್ಪಾದನಾ ಘಟಕ ಹಾಗೂ ನೂರಾರು ಜನರಿಗೆ ಉದ್ಯೋಗ ನೀಡುವ ಉದ್ಯಮವಾಗಿ ಬೆಳೆದಿದೆ. ಮತ್ತೊಂದೆಡೆ ಪಾರಂಪರಿಕ ವೃತ್ತಿಯನ್ನು ಉದ್ಯಮವನ್ನಾಗಿ ಬೆಳೆಸಿದವರು, ಉದ್ಯೋಗದಿಂದ ಉದ್ಯಮದತ್ತ ಹೆಜ್ಜೆ ಹಾಕಿದವರು, ವ್ಯಾಪಾರದ ಜತೆಗೆ ಸಮಾಜ ಸೇವೆಯನ್ನೂ ತಮ್ಮ ಕರ್ತವ್ಯವೆಂದು ಪರಿಗಣಿಸಿದವರು...

ಇಂತಹ ಪರಿಶ್ರಮ, ಪ್ರಾಮಾಣಿಕತೆ, ಉದ್ಯಮಶೀಲತೆ ಹಾಗೂ ಸಾಮಾಜಿಕ ಕಾಳಜಿಯ ಮೂಲಕ ಸಾಧನೆ ಮಾಡಿದ ಮಹನೀಯರಿಗೆ ಗದಗ ಉತ್ಸವ2026 ಗೌರವದ ವೇದಿಕೆಯಾಗುತ್ತಿದೆ.

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ವತಿಯಿಂದ ಆಗಸ್ಟ್ 16ರಂದು ಶ್ರೇಷ್ಠ ಉದ್ಯಮಿ, ಶ್ರೇಷ್ಠ ವರ್ತಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಗುತ್ತಿದೆ. ಈ ಸಾಧಕರ ಯಶೋಗಾಥೆ ಕೇವಲ ವ್ಯಾಪಾರದ ಕಥೆಯಲ್ಲ, ಇದು ಗದಗದ ಉದ್ಯಮಶೀಲತೆಯ ಬೆಳವಣಿಗೆಯ ಕಥೆಯೂ ಹೌದು.

#### 20ನೇ ವಯಸ್ಸಿನಲ್ಲಿ ಆರಂಭವಾದ ಉದ್ಯಮದ ಪಯಣ

ಕುಮಾರ ವಿ. ಘಟ್ಟದ ಅವರು 1981ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ಅಲ್ಪ ಬಂಡವಾಳದೊಂದಿಗೆ ಆರಂಭಿಸಿದ ಜಿ.ವಿ. ಘಟ್ಟದ ಟ್ರೇಡರ್ಸ್ ಇಂದು ಗದುಗಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದಿದೆ. ರಸ್ತೆ ಬದಿಯ ಸಣ್ಣ ಅಂಗಡಿಯಿಂದ ಆರಂಭವಾದ ವ್ಯಾಪಾರ, ಇಂದು ಸ್ವಂತ ಸಂಸ್ಕರಣಾ ಘಟಕ ಹೊಂದುವ ಮಟ್ಟಕ್ಕೆ ಬೆಳೆದಿದೆ.

ವ್ಯಾಪಾರದಿಂದ ಸಂಸ್ಕರಣೆಯತ್ತ ಹೆಜ್ಜೆ ಇಟ್ಟು, ರೈತರಿಂದ ನೇರವಾಗಿ ಉತ್ಪನ್ನ ಖರೀದಿಸಿ ಮೌಲ್ಯವರ್ಧನೆ ಮಾಡುತ್ತಿರುವುದು ಸಂಸ್ಥೆಯ ಪ್ರಮುಖ ಸಾಧನೆ. ಪ್ರಾಮಾಣಿಕತೆ, ನೈತಿಕತೆ ಮತ್ತು ಕಾಯಕವೇ ಕೈಲಾಸವೆಂಬ ದೃಢ ನಂಬಿಕೆಯೊಂದಿಗೆ ಲಾಭದ ಜತೆಗೆ ಸಂಬಂಧಗಳಿಗೂ ಬೆಲೆ ನೀಡಿರುವ ಅವರು ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ.

#### ತಂದೆಯ ಅಂಗಡಿಯಿಂದ ವಿಶ್ವಾಸದ ಮಳಿಗೆಯವರೆಗೆ

ಸುರೇಶಕುಮಾರ ರಾಜಮಲ್ ಓಸ್ವಾಲ್ ಅವರು 45 ವರ್ಷಕ್ಕೂ ಹೆಚ್ಚು ಕಾಲ ಬಟ್ಟೆ ವ್ಯಾಪಾರದಲ್ಲಿ ಅನುಭವ ಹೊಂದಿದ್ದಾರೆ. ತಂದೆ ಆರಂಭಿಸಿದ ಓಸ್ವಾಲ್ ಸೀರೆ ಅಂಗಡಿಯ ಜವಾಬ್ದಾರಿ ಹೊತ್ತು, ಅದನ್ನು ಇಂದು ಓಸ್ವಾಲ್ ಕಲೆಕ್ಷನ್‌ಟಿ ಎಂಬ ವಿಶ್ವಾಸಾರ್ಹ ಬಟ್ಟೆ ಮಳಿಗೆಯಾಗಿ ಬೆಳೆಸಿದ್ದಾರೆ.

ಮಹಿಳೆಯರು, ಪುರುಷರು ಮತ್ತು ಮಕ್ಕಳ ಎಥ್ನಿಕ್ ವೇರ್ ಹಾಗೂ ಪ್ರೀಮಿಯಂ ಬ್ರ್ಯಾಂಡ್‌ಗಳಿಗೆ ಒಂದೇ ಸೂರಿನಡಿ ತಾಣವಾಗಿರುವ ಸಂಸ್ಥೆ 50ಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿದೆ. 2024ರಲ್ಲಿ ಎರಡನೇ ಶಾಖೆಯನ್ನೂ ಆರಂಭಿಸಿದ್ದಾರೆ. ರಕ್ತದಾನ ಶಿಬಿರ, ಬಡ ಮಕ್ಕಳ ಶಿಕ್ಷಣಕ್ಕೆ ನೆರವು ಹಾಗೂ ವಿಧವಾ ಮಹಿಳೆಯರ ಸ್ವಾವಲಂಬನೆಗೆ ಆರ್ಥಿಕ ಸಹಾಯದ ಮೂಲಕ ಸಮಾಜ ಸೇವೆಯಲ್ಲೂ ಗುರುತಿಸಿಕೊಂಡಿದ್ದಾರೆ.

#### ಹತ್ತಿ ವ್ಯಾಪಾರದಿಂದ ಉದ್ಯಮದ ಗುರುತು

ಬಸಪ್ಪ ಸಿದ್ದಪ್ಪ ಶೆಟ್ಟಿಕೇರಿ ಅವರು ಉದ್ಯೋಗದಿಂದ ಉದ್ಯಮದತ್ತ ಹೆಜ್ಜೆ ಹಾಕಿದವರು. ಭಾರತೀಯ ಹತ್ತಿ ನಿಗಮದಲ್ಲಿ ಐದು ವರ್ಷ ಸೇವೆ ಸಲ್ಲಿಸಿದ ಬಳಿಕ, ಮಾರ್ಗದರ್ಶನ ಪಡೆದು 1984ರಲ್ಲಿ ಎಸ್. ಶೆಟ್ಟಿಕೇರಿ ಅಂಡ್ ಕಂಪನಿ ಸ್ಥಾಪಿಸಿ ಹತ್ತಿ ಅರಳಿ ವ್ಯಾಪಾರ ಆರಂಭಿಸಿದರು. ನಂತರದ ವರ್ಷಗಳಲ್ಲಿ ಹತ್ತಿ ಉದ್ಯಮದಲ್ಲಿ ತಮ್ಮದೇ ಆದ ಸ್ಥಾನ ಗಳಿಸಿದ್ದಾರೆ.

ಸಂಗಮೇಶ ಕೆ. ಗೌರಿಮಠ ಅವರು ದ್ವಿತೀಯ ಪಿಯುಸಿವರೆಗೆ ಶಿಕ್ಷಣ ಪಡೆದರೂ ಸ್ವಂತ ಪರಿಶ್ರಮದಿಂದ ಉದ್ಯಮ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಹೊಳೆಆಲೂರು ಹಾಗೂ ಶಿರೋಳದಲ್ಲಿ ಏಳು ಸಂಸ್ಥೆಗಳನ್ನು ನಡೆಸುತ್ತಿದ್ದು, ಆಟೋಮೊಬೈಲ್ಸ್, ಮೋಟಾರ್ಸ್, ಟ್ರೇಡರ್ಸ್ ಹಾಗೂ ಅರ್ಥ್ ಮೂವರ್ಸ್ ಕ್ಷೇತ್ರಗಳಲ್ಲಿ ಉದ್ಯಮ ವಿಸ್ತರಿಸಿದ್ದಾರೆ. ಈ ಸಂಸ್ಥೆಗಳ ಮೂಲಕ ನೂರಾರು ಜನರಿಗೆ ಉದ್ಯೋಗ ದೊರೆತಿದೆ.

#### ಪಾರಂಪರಿಕ ನೇಕಾರಿಕೆಯಿಂದ ಉದ್ಯಮದತ್ತ

ವೀರಣ್ಣ ಹಾಲಪ್ಪ ಪವಾಡದ ಅವರು ಶಿಗ್ಲಿ ಗ್ರಾಮದ ಪಾರಂಪರಿಕ ನೇಕಾರ ಕುಟುಂಬದ ಹಿನ್ನೆಲೆಯಿಂದ ಬಂದವರು. ನೇಕಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಶ್ರೀ ರಂಭಾಪುರಿ ಟೆಕ್ಸ್ಟೈಲ್ಸ್ ಮೂಲಕ ನೇಕಾರ ಸಮುದಾಯಕ್ಕೆ ಉದ್ಯೋಗ ಕಲ್ಪಿಸಿದ್ದಾರೆ. ಶ್ರೀ ಅನ್ನದಾನೇಶ್ವರ ಆಗ್ರೋ ಟ್ರೇಡರ್ಸ್ ಮೂಲಕ ರೈತಪರ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ.

ಈರಣ್ಣ ಸಂಗಪ್ಪ ಸೊನ್ನದ ಅವರು ಗಜೇಂದ್ರಗಡದಲ್ಲಿ ವ್ಯಾಪಾರ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. 1976ರಲ್ಲಿ ಎಂ.ವಿ. ಸೊನ್ನದ್ ಕಂಪನಿ ಹೆಸರಿನಲ್ಲಿ ದಲಾಲಿ ಅಂಗಡಿ ಆರಂಭಿಸಿ, 1992ರಲ್ಲಿ ವಿಜಯ ಆಯಿಲ್ ಮಿಲ್ ಸ್ಥಾಪಿಸುವ ಮೂಲಕ ಉದ್ಯಮ ವಿಸ್ತರಿಸಿದ್ದಾರೆ. ಕುಟುಂಬದ ಸದಸ್ಯರ ಸಹಕಾರದೊಂದಿಗೆ ಉದ್ಯಮವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

#### ಮುಂಡರಗಿಯಲ್ಲಿ ವ್ಯಾಪಾರದ ವಿಶ್ವಾಸದ ಹೆಸರು

ರಾಜಸ್ಥಾನದ ಜಾಲೋರ್ ಜಿಲ್ಲೆಯ ಬಾದರಾಜೋನ್ ಗ್ರಾಮದವರಾದ ಗೌತಮ್ ಚಂದ್ ಮೇಘರಾಜ್ ಚೋಪ್ರಾ ಅವರು 1980ರಲ್ಲಿ ಸಹೋದರ ರೂಪಚಂದ್ ಜೈನ್ ಅವರೊಂದಿಗೆ ಮುಂಡರಗಿಗೆ ಬಂದು ಗೌತಮ್ ಕಿರಾಣಿ ಸ್ಟೋರ್ಸ್‌ಟಿ ಮೂಲಕ ವ್ಯಾಪಾರ ಆರಂಭಿಸಿದರು.

1990ರಲ್ಲಿ ರಾಮದೇವ ಕಿರಾಣಿ ಸ್ಟೋರ್, 1997ರಲ್ಲಿ ಎಪಿಎಂಸಿಯಲ್ಲಿ ರಾಮದೇವ ಟ್ರೇಡಿಂಗ್ ಕಂಪನಿ ಹಾಗೂ 2021ರಲ್ಲಿ ಗೌತಮ್ ಟ್ರೇಡಿಂಗ್ ಕಂಪನಿ ಸ್ಥಾಪಿಸಿ ಯಶಸ್ವಿ ವರ್ತಕರಾಗಿ ಬೆಳೆದಿದ್ದಾರೆ. ಎಪಿಎಂಸಿ ವರ್ತಕರ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ರಾಜಸ್ಥಾನ ಮೂಲದವರಾದರೂ ಕನ್ನಡದಲ್ಲೇ ವ್ಯವಹರಿಸುವ ಅವರ ಕನ್ನಡಪರ ನಿಲುವಿಗೆ ವಿವಿಧ ಕನ್ನಡಪರ ಸಂಘಟನೆಗಳಿಂದ ಗೌರವ ದೊರೆತಿದೆ.

#### ಉದ್ಯಮದ ಜತೆಗೆ ಮಹಿಳಾ ಸೇವೆ

ನಿರ್ಮಲಾ ದಶರಥರಾಜ ಕೊಳ್ಳಿ ಅವರು ವಾಣಿಜ್ಯೋದ್ಯಮ ಹಾಗೂ ಸಮಾಜ ಸೇವೆಯಲ್ಲಿ ಗುರುತಿಸಿಕೊಂಡಿದ್ದಾರೆ. ರಾಷ್ಟ್ರ ಸೇವಿಕಾ ಸಮಿತಿಯ ಸದಸ್ಯೆಯಾಗಿ ಹಾಗೂ ಗದಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಮಹಿಳಾ ವಿಭಾಗದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

#### ಯುವ ಉದ್ಯಮಿಗಳಿಗೂ ವಿಶೇಷ ಗೌರವ

ಈ ಬಾರಿ ಅನುಭವಿಗಳ ಜತೆಗೆ ಹೊಸ ತಲೆಮಾರಿನ ಉದ್ಯಮಶೀಲತೆಗೂ ಗೌರವ ನೀಡಲಾಗುತ್ತಿದೆ.

ವಿಜಯಕುಮಾರ ಮೇಗೂರು ಅವರು ಧಾನ್ಯ ಸಂಸ್ಕರಣಾ ಯಂತ್ರೋಪಕರಣಗಳ ತಯಾರಿಕೆ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. 2011ರಲ್ಲಿ ಕಾರಟಗಿಯಲ್ಲಿ ಸಣ್ಣ ಮಟ್ಟದಲ್ಲಿ ವ್ಯಾಪಾರ ಆರಂಭಿಸಿ, 2016ರಲ್ಲಿ ಬೆಂಗಳೂರಿನಲ್ಲಿ ಉತ್ಪಾದನಾ ಉದ್ಯಮ ಸ್ಥಾಪಿಸಿದರು. 2025ರಲ್ಲಿ ಕಾರಟಗಿಯಲ್ಲೇ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಬೃಹತ್ ಉತ್ಪಾದನಾ ಘಟಕ ಆರಂಭಿಸಿದ್ದಾರೆ. ಸ್ಥಳೀಯ ಯುವಕರಿಗೆ ಉದ್ಯೋಗ ಕಲ್ಪಿಸುವ ಜತೆಗೆ ಮೇಕ್ ಇನ್ ಇಂಡಿಯಾಟಿ ಪರಿಕಲ್ಪನೆಗೆ ಬಲ ತುಂಬುತ್ತಿದ್ದಾರೆ.

ಹರ್ಷದ್ ಅಯೂಬ್ ಖಾಜಿ ಅವರು ಮೆಕ್ಯಾನಿಕಲ್ ಡಿಸೈನ್ ಇಂಜಿನಿಯರ್ ಆಗಿ ಸುಮಾರು ಆರು ವರ್ಷ ಅನುಭವ ಪಡೆದ ಬಳಿಕ 2022ರಲ್ಲಿ ಸ್ವಂತ ಕಂಪನಿ ಆರಂಭಿಸಿದರು.

ಅಲ್ಪಾವಧಿಯಲ್ಲೇ ದೇಶ-ವಿದೇಶಗಳಲ್ಲಿ ಗುರುತಿಸಿಕೊಂಡಿರುವ ಸಂಸ್ಥೆ, ಏರೋಸ್ಪೇಸ್ ಹಾಗೂ ರಕ್ಷಣಾ ಕೈಗಾರಿಕೆಗಳಿಗೆ ಕಾಂಟ್ರ್ಯಾಕ್ಟ್ ಮ್ಯಾನುಫ್ಯಾಕ್ಚರರ್ ಆಗಿ ಬಿಡಿಭಾಗಗಳನ್ನು ತಯಾರಿಸಿ ಪೂರೈಸುತ್ತಿದೆ. ಗದಗದಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಅವರ ಸಾಧನೆ ಯುವ ಇಂಜಿನಿಯರ್‌ಗಳಿಗೆ ಸ್ಫೂರ್ತಿಯಾಗಿದೆ.

ಸುವರ್ಣಾ ಮದರಿಮಠ ಅವರು ನಾರಿ ಸಮ್ಮಾನಟಿ ಪ್ರಶಸ್ತಿಗೆ ಪುರಸ್ಕೃತರಾಗಿದ್ದು, ಇದೇ ಸಂದರ್ಭದಲ್ಲಿ ಅವರನ್ನು ಸಹ ಸನ್ಮಾನಿಸಲಾಗುತ್ತಿದೆ.

ಗದಗ ಉತ್ಸವ2026ರ ಗೌರವದ ವೇದಿಕೆಯಲ್ಲಿ

**ಶ್ರೇಷ್ಠ ಉದ್ಯಮಿ: ಕುಮಾರ ವಿ. ಘಟ್ಟದ**

**ಶ್ರೇಷ್ಠ ವರ್ತಕ: ಸುರೇಶಕುಮಾರ ರಾಜಮಲ್ ಓಸ್ವಾಲ್**

**ಗೌರವ ಪುರಸ್ಕೃತರು: ಬಸಪ್ಪ ಶೆಟ್ಟಿಕೇರಿ, ಸಂಗಮೇಶ ಗೌರಿಮಠ, ಈರಣ್ಣ ಸೊನ್ನದ, ವೀರಣ್ಣ ಪವಾಡದ, ಗೌತಮ್ ಚೋಪ್ರಾ, ನಿರ್ಮಲಾ ಕೊಳ್ಳಿ**

**ವಿಶೇಷ ಸನ್ಮಾನ: ವಿಜಯಕುಮಾರ ಮೇಗೂರು, ಹರ್ಷದ್ ಖಾಜಿ, ಸುವರ್ಣ ಮದರಿಮಠರು**

#### ಸಾಧನೆಯ ಹಿಂದೆ ಸಮಾಜದ ನಂಟು

ಈ ಸಾಧಕರ ಯಶೋಗಾಥೆಗಳನ್ನು ಗಮನಿಸಿದರೆ ಪ್ರತಿಯೊಬ್ಬರ ಹಾದಿಯೂ ವಿಭಿನ್ನ. ಆದರೆ ಎಲ್ಲರಲ್ಲೂ ಒಂದು ಸಾಮಾನ್ಯ ಗುಣವಿದೆಪರಿಶ್ರಮದ ಜತೆಗೆ ಸಮಾಜದ ಮೇಲಿನ ಕಾಳಜಿ.

ರೈತರ ಉತ್ಪನ್ನಕ್ಕೆ ಮೌಲ್ಯವರ್ಧನೆ ಮಾಡುವ ಉದ್ಯಮಿ, ನೂರಾರು ಮಂದಿಗೆ ಉದ್ಯೋಗ ನೀಡಿದ ವರ್ತಕ, ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಸಮಾಜ ಸೇವಕ, ಪಾರಂಪರಿಕ ವೃತ್ತಿಗೆ ಹೊಸ ಆಯಾಮ ನೀಡಿದ ಉದ್ಯಮಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಯುವ ಉದ್ಯಮಿಹೀಗೆ ಗದಗದ ಉದ್ಯಮ ಲೋಕದ ವಿವಿಧ ಮುಖಗಳು ಈ ಸಾಧಕರ ಮೂಲಕ ಕಾಣಿಸುತ್ತವೆ.

ಹೀಗಾಗಿ, ಗದಗ ಉತ್ಸವ2026ರ ಈ ಸನ್ಮಾನ ಕೇವಲ ಪ್ರಶಸ್ತಿ ಪ್ರದಾನವಲ್ಲ. ಗದಗದ ಉದ್ಯಮಶೀಲತೆ, ಪರಿಶ್ರಮ, ಪ್ರಾಮಾಣಿಕತೆ ಮತ್ತು ಸಮಾಜಮುಖಿ ಚಿಂತನೆಗೆ ಸಲ್ಲಿಸುವ ಗೌರವ.

ಸಣ್ಣ ಅಂಗಡಿಯಿಂದ ಆರಂಭಿಸಿ ದೊಡ್ಡ ಉದ್ಯಮ ಕಟ್ಟಿದವರಿಂದ ಹಿಡಿದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವ ಯುವ ಉದ್ಯಮಿಗಳವರೆಗೆಈ ಸಾಧಕರ ಯಶೋಗಾಥೆಗಳು ಮುಂದಿನ ಪೀಳಿಗೆಗೆ ಒಂದೇ ಸಂದೇಶ ನೀಡುತ್ತವೆ.

ಕನಸು ದೊಡ್ಡದಿರಲಿ, ಹೆಜ್ಜೆ ಸಣ್ಣದಾದರೂ ಪರವಾಗಿಲ್ಲ. ನಿರಂತರ ಪರಿಶ್ರಮವಿದ್ದರೆ ಯಶಸ್ಸು ದೂರವಲ್ಲ.

– ಈರಣ್ಣ ಮುದಗಲ್ಲ, ನಾಗರಾಜ ನರಗುಂದ,

---

### VBGRAMG ಅಭಿಯಾನ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಚನೆ: ಸಿ.ಆರ್. ಮುಂಡರಗಿ

# ಎಲ್ಲ ತಾಲೂಕುಗಳಲ್ಲೂ ಉದ್ಯೋಗ ಚೀಟಿ ಮೇಳ

**ವಿಜಯಸಾಕ್ಷಿ ಸುದ್ದಿ, ಗದಗ**




ಗ್ರಾಮೀಣ ಕುಟುಂಬಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಆಗಸ್ಟ್ 15ರಿಂದ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಉದ್ಯೋಗ ಚೀಟಿ ಮೇಳಟಿ (ಜಾಬ್ ಕಾರ್ಡ್ ಮೇಳ) ಅಭಿಯಾನವನ್ನು ಗದಗ ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ ಸೂಚಿಸಿದ್ದಾರೆ.

ಈ ಕುರಿತು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯವು ಜಿಲ್ಲೆ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳಿಗೆ ನೀಡಿರುವ ಮಾರ್ಗಸೂಚಿಯಂತೆ, ಈವರೆಗೆ ಯೋಜನೆಯಡಿ ನೋಂದಣಿಯಾಗದ ಅರ್ಹ ಗ್ರಾಮೀಣ ಕುಟುಂಬಗಳನ್ನು ಗುರುತಿಸಿ, ಅವರಿಂದ ಅರ್ಜಿ ಪಡೆದು VB-GRAMG ಯೋಜನೆಯಡಿ ಹೊಸ ಮಾದರಿಯ ಉದ್ಯೋಗ ಚೀಟಿಗಳನ್ನು ಒದಗಿಸಬೇಕು. ಅಲ್ಲದೆ, ಗ್ರಾಮಸ್ಥರಿಗೆ ಯೋಜನೆಯ ಕುರಿತು ಸಮಗ್ರ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.

ಜಾಬ್ ಕಾರ್ಡ್ ಮೇಳದ ಅಂಗವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮನೆ-ಮನೆ ಭೇಟಿ, ಗ್ರಾಮಸಭೆ ಹಾಗೂ ಸ್ವಚ್ಛತಾ ವಾಹಿನಿಟಿ ಮೂಲಕ ಪ್ರಚಾರ ಸೇರಿದಂತೆ ವಿವಿಧ ಐಉಇ ಚಟುವಟಿಕೆಗಳನ್ನು ಕೈಗೊಂಡು ಜನರಲ್ಲಿ ಗ್ರಾಮೀಣ ರೋಜಗಾರ್ ಗ್ಯಾರಂಟಿ ಕಾರ್ಡ್‌ಗಳ ಕುರಿತು ಜಾಗೃತಿ ಮೂಡಿಸಬೇಕು. ಅರ್ಹ ಕುಟುಂಬಗಳಿಂದ ಜಾಬ್ ಕಾರ್ಡ್‌ಗಾಗಿ ಅರ್ಜಿ ಸ್ವೀಕರಿಸಿ, ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಬೇಕಿದೆ.

ಅಭಿಯಾನದ ಸಂದರ್ಭದಲ್ಲಿ ಈಗಾಗಲೇ ನೋಂದಣಿಯಾಗಿ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ವಿವರಗಳನ್ನು ಪರಿಶೀಲಿಸಬೇಕು. ಉದ್ಯೋಗ ಚೀಟಿಯ ಕಾಲಾವಧಿ ಮುಗಿದಿದ್ದರೆ ನವೀಕರಿಸುವುದು, ಸದಸ್ಯರ ಸೇರ್ಪಡೆ, e&KYC ಸೇರಿದಂತೆ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದಕ್ಕೂ ಆದ್ಯತೆ ನೀಡಬೇಕು. ಜಾಬ್ ಕಾರ್ಡ್‌ಗೆ ಸಂಬಂಧಿಸಿದ ಅರ್ಜಿಗಳ ಸ್ವೀಕೃತಿ ಹಾಗೂ ವಿಲೇವಾರಿ ಪ್ರಕ್ರಿಯೆಯನ್ನು ನಿಯಮಾನುಸಾರ ನಡೆಸುವಂತೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

> **ಆಗಸ್ಟ್ 15ರಿಂದ ಆರಂಭವಾಗುವ ಉದ್ಯೋಗ ಚೀಟಿ ಮೇಳವನ್ನು ಜಿಲ್ಲೆಯ ಎಲ್ಲ ತಾಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಅರ್ಹ ಗ್ರಾಮೀಣ ಕುಟುಂಬಗಳನ್ನು ಗುರುತಿಸಿ, ಅವರಿಗೆ ಉದ್ಯೋಗ ಚೀಟಿ ಒದಗಿಸುವುದರ ಜತೆಗೆ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಅಧಿಕಾರಿಗಳು ಆದ್ಯತೆ ನೀಡಬೇಕು.**
>
> **– ಸಿ.ಆರ್. ಮುಂಡರಗಿ,**
> ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ

ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಬ್ ಕಾರ್ಡ್ ಮೇಳದ ಕುರಿತು ವ್ಯಾಪಕ ಪ್ರಚಾರ ಕೈಗೊಂಡು, ಅರ್ಹ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಅಭಿಯಾನದ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಕೈಗೊಂಡಿರುವ ಚಟುವಟಿಕೆಗಳ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವಂತೆಯೂ ಸೂಚಿಸಲಾಗಿದೆ. ವಿಶೇಷವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಜನರಿಗೆ ಯೋಜನೆಯ ಮಾಹಿತಿ ತಲುಪಿಸುವುದು ಮತ್ತು ಅರ್ಹ ಕುಟುಂಬಗಳನ್ನು ಗುರುತಿಸುವ ಕಾರ್ಯಕ್ಕೆ ಒತ್ತು ನೀಡಬೇಕಾಗಿದೆ.

ಆಗಸ್ಟ್ 15ರಿಂದ ಆರಂಭವಾಗಲಿರುವ ಈ ಅಭಿಯಾನವು ಗ್ರಾಮೀಣ ಜನರಿಗೆ ೞಆಎಅಖಎ ಯೋಜನೆಯಡಿ ದೊರೆಯುವ ಸೌಲಭ್ಯಗಳನ್ನು ತಲುಪಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದ್ದು, ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

---

### BRO ಚೇತಕ್ ಯೋಜನೆಯ 45ನೇ ಕಾರ್ಯಪಡೆಯ ಕಮಾಂಡರ್ ಆಗಿ ಸೇವೆ

# ಸೇನಾ ಸೇವೆಯಲ್ಲಿ ಗದಗದ ಹೆಮ್ಮೆಯ ಪುತ್ರಿ ಕರ್ನಲ್ ಸ್ಫೂರ್ತಿ ಕುಲಕರ್ಣಿ



ಭಾರತೀಯ ಸೇನೆಯಲ್ಲಿ ಉನ್ನತ ಹುದ್ದೆ ಅಲಂಕರಿಸಿ ದೇಶ ಸೇವೆಯಲ್ಲಿ ತೊಡಗಿರುವ ಗದಗ ಜಿಲ್ಲೆಯ ಹೆಮ್ಮೆಯ ಪುತ್ರಿ ಕರ್ನಲ್ ಸ್ಫೂರ್ತಿ ಕುಲಕರ್ಣಿ ಅವರು ಜಿಲ್ಲೆಯ ಮಹಿಳಾ ಸಮುದಾಯಕ್ಕೆ ಪ್ರೇರಣೆಯಾಗಿದ್ದಾರೆ.

ಗದಗ ಜಿಲ್ಲೆಯ ಹೊಂಬಳ ಗ್ರಾಮದ ಮೂಲದವರಾದ ಕರ್ನಲ್ ಸ್ಫೂರ್ತಿ ಕುಲಕರ್ಣಿ, ಗದಗ ನಗರದ ಬೆಟಗೇರಿ ಹೆಲ್ತ್ ಕ್ಯಾಂಪ್ ಪ್ರದೇಶದಲ್ಲಿ ನೆಲೆಸಿದ್ದವರು. ಭಾರತೀಯ ಸೇನೆಯಲ್ಲಿ ಕರ್ನಲ್ ಕಮಾಂಡರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅವರು ತಮ್ಮ ಶಿಸ್ತು, ಧೈರ್ಯ, ಕಠಿಣ ಪರಿಶ್ರಮ ಹಾಗೂ ದೇಶಭಕ್ತಿಯ ಮೂಲಕ ಗಮನ ಸೆಳೆದಿದ್ದಾರೆ.

ಗಡಿ ರಸ್ತೆಗಳ ಸಂಘಟನೆ (ಆ್ಕಣ)ಯ ಚೇತಕ್ ಯೋಜನೆಯಡಿ 45ನೇ ಕಾರ್ಯಪಡೆಯ ಕಮಾಂಡರ್ ಆಗಿ ಅವರು ಅಧಿಕಾರ ವಹಿಸಿಕೊಂಡಿರುವುದು ಮಹತ್ವದ ಸಾಧನೆಯಾಗಿದೆ. ಈ ಜವಾಬ್ದಾರಿ ವಹಿಸಿಕೊಂಡ ಮಹಿಳಾ ಅಧಿಕಾರಿಗಳ ಪೈಕಿ ಅವರ ಸಾಧನೆ ಗಮನಾರ್ಹವಾಗಿದೆ.

ಐತಿಹಾಸಿಕ ಗದಗ ಜಿಲ್ಲೆ ಮಹಿಳಾ ಕುಸ್ತಿ, ಸ್ವಯಂರಕ್ಷಣೆ ಹಾಗೂ ಶೌರ್ಯ ತರಬೇತಿಗೆ ತನ್ನದೇ ಆದ ಪರಂಪರೆ ಹೊಂದಿದೆ. ಜಿಲ್ಲೆಯ ಅನೇಕ ಯುವತಿಯರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಜಿಲ್ಲೆ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಈ ಸಾಲಿಗೆ ಸೇನಾ ಸೇವೆಯ ಮೂಲಕ ಕರ್ನಲ್ ಸ್ಫೂರ್ತಿ ಕುಲಕರ್ಣಿ ಅವರ ಸಾಧನೆಯೂ ಸೇರ್ಪಡೆಯಾಗಿದೆ.

ಕಠಿಣ ತರಬೇತಿ, ಶಿಸ್ತು ಮತ್ತು ಧೈರ್ಯದಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಫೂರ್ತಿ ಕುಲಕರ್ಣಿ ಅವರು ಯುವತಿಯರಿಗೆ ಸ್ಫೂರ್ತಿಯಾಗಿದ್ದಾರೆ. ದೇಶ ಸೇವೆಯಲ್ಲಿ ತೊಡಗಿರುವ ಗದಗ ಜಿಲ್ಲೆಯ ಈ ಧೀರ ಪುತ್ರಿಯ ಸಾಧನೆಗೆ ಜಿಲ್ಲೆಯ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ದೇಶ ಸೇವೆಯಲ್ಲಿ ತೊಡಗಿರುವ ಗದಗ ಜಿಲ್ಲೆಯ ಹೆಮ್ಮೆಯ ಪುತ್ರಿ ಕರ್ನಲ್ ಸ್ಫೂರ್ತಿ ಕುಲಕರ್ಣಿ ಅವರಿಗೆ ನಮ್ಮ ಪತ್ರಿಕೆ ಬಳಗದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು.

– ಜಿ.ಕೆ.ಎಚ್. ಕಲಬುರ್ಗಿ

---

### ತ್ಯಾಗದ ನೆಲೆಯಲ್ಲಿ ನಿರ್ಮಾಣವಾದ ಸ್ವಾತಂತ್ರ್ಯದ ಮೌಲ್ಯ ಅರಿತು, ದೇಶದ ಭವಿಷ್ಯಕ್ಕೆ ಪ್ರತಿಯೊಬ್ಬರೂ ಕೊಡುಗೆ ನೀಡಬೇಕು

# ಸ್ವಾತಂತ್ರ್ಯ ಎಂದರೆ ಕೇವಲ ಧ್ವಜಾರೋಹಣವಲ್ಲ




## ಈ ಸ್ವಾತಂತ್ರ್ಯ ದಿನ ಒಂದು ಸಂಕಲ್ಪವಾಗಲಿ

**ಈ ಆಗಸ್ಟ್ 15ರಂದು ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದರ ಜತೆಗೆ ಪ್ರತಿಯೊಬ್ಬರೂ ಒಂದು ಸಂಕಲ್ಪ ಮಾಡೋಣ.**

1. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ.
2. ನನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ.
3. ಪ್ರಕೃತಿಯನ್ನು ಕಾಪಾಡುತ್ತೇನೆ.
4. ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸುತ್ತೇನೆ.
5. ಮಕ್ಕಳಿಗೆ ಉತ್ತಮ ಮೌಲ್ಯಗಳನ್ನು ನೀಡಲು ಪ್ರಯತ್ನಿಸುತ್ತೇನೆ.
6. ದೇಶದ ಗೌರವವನ್ನು ಎತ್ತಿಹಿಡಿಯುವ ಜವಾಬ್ದಾರಿಯುತ ನಾಗರಿಕನಾಗಿರುತ್ತೇನೆ.

ಆಗಸ್ಟ್ 15 ಎಂಬುದು ಪ್ರತಿಯೊಬ್ಬ ಭಾರತೀಯನ ಮನದಲ್ಲಿ ಹೆಮ್ಮೆ, ದೇಶಭಕ್ತಿ ಹಾಗೂ ಗೌರವದ ಭಾವನೆ ಮೂಡಿಸುವ ಐತಿಹಾಸಿಕ ದಿನ. ಅನೇಕ ಹೋರಾಟಗಾರರ ತ್ಯಾಗ, ಬಲಿದಾನ ಮತ್ತು ನಿರಂತರ ಹೋರಾಟದ ಫಲವಾಗಿ ಭಾರತ 1947ರ ಆಗಸ್ಟ್ 15ರಂದು ಬ್ರಿಟಿಷರ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಿತು.

ಆದರೆ ಸ್ವಾತಂತ್ರ್ಯ ಎಂದರೆ ಕೇವಲ ಒಂದು ದಿನ ಧ್ವಜಾರೋಹಣ ಮಾಡಿ, ಸಿಹಿ ಹಂಚಿಕೊಂಡು, ದೇಶಭಕ್ತಿ ಗೀತೆಗಳನ್ನು ಹಾಡುವುದಕ್ಕೆ ಸೀಮಿತವಾಗಬಾರದು. ನಮ್ಮ ಪೂರ್ವಜರು ಹೋರಾಡಿ ಗಳಿಸಿಕೊಟ್ಟ ಸ್ವಾತಂತ್ರ್ಯದ ಮೌಲ್ಯವನ್ನು ಅರಿತು, ಅದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉತ್ತಮ ಭಾರತವನ್ನು ಕಟ್ಟಿಕೊಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

#### ತ್ಯಾಗದ ನೆಲೆಯಲ್ಲಿ ನಿರ್ಮಾಣವಾದ ಸ್ವಾತಂತ್ರ್ಯ

ಭಾರತದ ಸ್ವಾತಂತ್ರ್ಯ ಹೋರಾಟವನ್ನು ನೆನಪಿಸಿಕೊಂಡಾಗ ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸರ್ದಾರ್ ವಲ್ಲಭ ಭಾಯಿ ಪಟೇಲ್, ಬಾಲ ಗಂಗಾಧರ ತಿಲಕ್ ಸೇರಿದಂತೆ ಅಸಂಖ್ಯಾತ ಹೋರಾಟಗಾರರ ಹೆಸರುಗಳು ಕಣ್ಣ ಮುಂದೆ ಬರುತ್ತವೆ. ದೇಶಕ್ಕಾಗಿ ತಮ್ಮ ವೈಯಕ್ತಿಕ ಬದುಕನ್ನೇ ತ್ಯಾಗ ಮಾಡಿದ ಅವರ ಹೋರಾಟದಲ್ಲಿ ಸ್ವಾರ್ಥಕ್ಕೆ ಯಾವುದೇ ಸ್ಥಾನವಿರಲಿಲ್ಲ.

ನಾವು ಇಂದು ಅನುಭವಿಸುತ್ತಿರುವ ಸ್ವಾತಂತ್ರ್ಯದ ಹಿಂದೆ ಅವರ ಅಪಾರ ಪರಿಶ್ರಮ, ಧೈರ್ಯ ಮತ್ತು ತ್ಯಾಗ ಅಡಗಿದೆ. ಆದ್ದರಿಂದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಅವರನ್ನು ಕೇವಲ ಸ್ಮರಿಸುವುದಷ್ಟೇ ಅಲ್ಲ, ಅವರ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡಬೇಕಿದೆ.

#### ಹಕ್ಕುಗಳ ಜತೆಗೆ ಕರ್ತವ್ಯವೂ ಮುಖ್ಯ

ಸ್ವಾತಂತ್ರ್ಯ ನಮಗೆ ಹಲವು ಹಕ್ಕುಗಳನ್ನು ನೀಡಿದೆ. ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು, ಶಿಕ್ಷಣ ಪಡೆಯುವ ಅವಕಾಶ, ನಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳುವ ಸ್ವಾತಂತ್ರ್ಯ ಹಾಗೂ ಕನಸುಗಳನ್ನು ನನಸಾಗಿಸಿಕೊಳ್ಳುವ ಅವಕಾಶವೂ ಸ್ವಾತಂತ್ರ್ಯದ ಅಮೂಲ್ಯ ಕೊಡುಗೆಗಳು. ಆದರೆ ಹಕ್ಕುಗಳ ಜತೆಗೆ ಕರ್ತವ್ಯಗಳೂ ಇವೆ.

ದೇಶದ ಕಾನೂನುಗಳನ್ನು ಗೌರವಿಸುವುದು, ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು, ಪರಿಸರ ಸಂರಕ್ಷಿಸುವುದು, ಸ್ವಚ್ಛತೆಯನ್ನು ಕಾಪಾಡುವುದು, ಇತರರ ಹಕ್ಕುಗಳನ್ನು ಗೌರವಿಸುವುದು ಹಾಗೂ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸುವುದು ಕೂಡ ದೇಶಸೇವೆಯೇ ಆಗಿದೆ.

#### ಯುವಜನತೆ ಮತ್ತು ಮಕ್ಕಳೇ ನಾಳಿನ ಭಾರತದ ನಿರ್ಮಾತೃಗಳು

ಇಂದಿನ ಮಕ್ಕಳು ಮತ್ತು ಯುವಜನತೆಯೇ ನಾಳಿನ ಭಾರತದ ನಿರ್ಮಾತೃಗಳು. ಅವರ ಕೈಯಲ್ಲಿರುವ ಪುಸ್ತಕವೇ ಭವಿಷ್ಯದ ಭಾರತದ ದಿಕ್ಕನ್ನು ಬದಲಿಸುವ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಶಿಕ್ಷಣದ ಜತೆಗೆ ದೇಶದ ಇತಿಹಾಸ, ಸಂವಿಧಾನ, ಸಂಸ್ಕೃತಿ ಹಾಗೂ ಮೌಲ್ಯಗಳ ಅರಿವನ್ನು ಬೆಳೆಸುವುದು ಅತ್ಯಂತ ಅಗತ್ಯ.

ದೇಶಭಕ್ತಿ ಎಂದರೆ ಕೇವಲ ಘೋಷಣೆ ಕೂಗುವುದಲ್ಲ. ಶಾಲೆಯನ್ನು ಸ್ವಚ್ಛವಾಗಿಡುವುದು, ಮರಗಳನ್ನು ಬೆಳೆಸುವುದು, ಹಿರಿಯರನ್ನು ಗೌರವಿಸುವುದು, ಸ್ನೇಹಿತರೊಂದಿಗೆ ಸೌಹಾರ್ದದಿಂದ ನಡೆದುಕೊಳ್ಳುವುದು, ಪ್ರಾಮಾಣಿಕವಾಗಿ ಓದುವುದು ಹಾಗೂ ತಮ್ಮ ಪ್ರತಿಭೆಯನ್ನು ದೇಶದ ಒಳಿತಿಗಾಗಿ ಬಳಸುವುದು ಕೂಡ ನಿಜವಾದ ದೇಶಭಕ್ತಿಯೇ ಆಗಿದೆ.

#### ವೈವಿಧ್ಯತೆಯಲ್ಲೇ ಭಾರತದ ಶಕ್ತಿ

ಭಾರತ ಹಲವು ಭಾಷೆ, ಧರ್ಮ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳ ನಾಡು. ಈ ವೈವಿಧ್ಯತೆಯೇ ನಮ್ಮ ವಿಶೇಷತೆ.

ಭಿನ್ನತೆಗಳನ್ನು ಗೌರವಿಸುತ್ತಾ ನಾವೆಲ್ಲರೂ ಭಾರತೀಯರು ಎಂಬ ಒಂದೇ ಭಾವನೆಯೊಂದಿಗೆ ಬದುಕುವುದು ನಮ್ಮ ರಾಷ್ಟ್ರದ ದೊಡ್ಡ ಶಕ್ತಿಯಾಗಿದೆ.

ಧರ್ಮ, ಜಾತಿ, ಭಾಷೆ ಅಥವಾ ಪ್ರದೇಶದ ಹೆಸರಿನಲ್ಲಿ ವಿಭಜನೆಯಾಗದೆ ಪರಸ್ಪರ ಗೌರವ ಮತ್ತು ಸಹೋದರತ್ವದಿಂದ ಬದುಕಿದಾಗ ಮಾತ್ರ ಸ್ವಾತಂತ್ರ್ಯದ ನಿಜವಾದ ಸೌಂದರ್ಯವನ್ನು ಅನುಭವಿಸಲು ಸಾಧ್ಯ.

ಇಂತಹ ಸಣ್ಣ ಸಣ್ಣ ಸಂಕಲ್ಪಗಳೇ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅಡಿಪಾಯವಾಗುತ್ತವೆ.

ದೇಶಪ್ರೇಮ ಒಂದು ದಿನದ ಭಾವನೆಯಾಗದೆ, ಪ್ರತಿದಿನದ ಬದುಕಿನ ಮೌಲ್ಯವಾಗಲಿ.

ಸ್ವಾತಂತ್ರ್ಯ ದಿನ ಕೇವಲ ಕ್ಯಾಲೆಂಡರ್‌ನ ಒಂದು ದಿನವಲ್ಲ. ಅದು ನಮ್ಮ ಇತಿಹಾಸವನ್ನು ನೆನಪಿಸಿಕೊಳ್ಳುವ ದಿನ, ದೇಶಕ್ಕಾಗಿ ತ್ಯಾಗ ಮಾಡಿದವರನ್ನು ಗೌರವಿಸುವ ದಿನ, ನಮ್ಮ ಹಕ್ಕುಕರ್ತವ್ಯಗಳನ್ನು ಅರಿಯುವ ದಿನ ಹಾಗೂ ಉತ್ತಮ ಭಾರತದ ನಿರ್ಮಾಣಕ್ಕೆ ಹೊಸ ಹೆಜ್ಜೆ ಇಡುವ ದಿನ.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ಕನಸಿನ ಭಾರತವನ್ನು ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.



ದೇಶಪ್ರೇಮ ಒಂದು ದಿನದ ಆಚರಣೆಯಾಗದೆ, ಪ್ರತಿದಿನದ ಬದುಕಿನ ಮೌಲ್ಯವಾಗಲಿ.

**ಜೈ ಹಿಂದ್!**
**ಜೈ ಭಾರತ!**

**– ಶ್ರೀಮತಿ ಚಂದ್ರಕಲಾ ಎಂ. ಇಟಗಿಮಠ**

---

# ಕಾನೂನು ಪದವೀಧರರಿಗೆ ತರಬೇತಿ: ಅರ್ಜಿ ಆಹ್ವಾನ

**ವಿಜಯಸಾಕ್ಷಿ ಸುದ್ದಿ, ಗದಗ**

202627ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತ ಸಮುದಾಯದ ಕಾನೂನು ಪದವೀಧರರಿಗೆ ವಕೀಲ ವೃತ್ತಿ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.31 ಕೊನೆಯ ದಿನವಾಗಿದೆ.

ಅಭ್ಯರ್ಥಿಗಳು ಗದಗ ಜಿಲ್ಲೆಯವರಾಗಿದ್ದು, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ₹3.50 ಲಕ್ಷದೊಳಗೆ ಇರಬೇಕು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷ ಮೀರಿರಬಾರದು.

ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿರಬೇಕು ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಹಿಂದಿನ ಎರಡು ವರ್ಷಗಳೊಳಗಾಗಿ ಕಾನೂನು ಪದವಿ ಪೂರ್ಣಗೊಳಿಸಿರಬೇಕು.

ತರಬೇತಿ ಅವಧಿ ನಾಲ್ಕು ವರ್ಷಗಳಾಗಿದ್ದು, ಆಯ್ಕೆಯಾದವರಿಗೆ ತಿಂಗಳಿಗೆ ₹5,000 ತರಬೇತಿ ಭತ್ಯೆ ನೀಡಲಾಗುವುದು. ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಹೆಚ್ಚಿನ ಮಾಹಿತಿಗಾಗಿ ಗದಗ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಯನ್ನು ಸಂಪರ್ಕಿಸಬಹುದು.




ಆ.20ರಂದು ಕನಕ ಭವನದಲ್ಲಿ ಕಾರ್ಯಕ್ರಮ; ವಿದ್ಯಾರ್ಥಿಗಳಿಗೆ ಸನ್ಮಾನ, ವಿಜೇತರಿಗೆ ಬಹುಮಾನ

# ಅರಸು ಜಯಂತಿ ಅರ್ಥಪೂರ್ಣ ಆಚರಣೆಗೆ ಸಿದ್ಧತೆ

**ವಿಜಯಸಾಕ್ಷಿ ಸುದ್ದಿ, ಗದಗ**

ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆಯನ್ನು ಆ.20ರಂದು ನಗರದ ಕನಕ ಭವನದಲ್ಲಿ ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅಧಿಕಾರಿಗಳಿಗೆ ಸೂಚಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ ಮುದ್ರಣ, ಕಾರ್ಯಕ್ರಮದ ಸ್ಥಳದ ಸ್ವಚ್ಛತೆ ಸೇರಿದಂತೆ ಎಲ್ಲ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಡಿ. ದೇವರಾಜ ಅರಸು ಅವರ ಜೀವನ, ಆಡಳಿತ ಹಾಗೂ ಸಾಮಾಜಿಕ ಸುಧಾರಣೆಗಳ ಕುರಿತು ಆಳವಾಗಿ ಅಧ್ಯಯನ ಮಾಡಿದವರಿಂದ ಉಪನ್ಯಾಸ ಕಾರ್ಯಕ್ರಮ ಆಯೋಜಿಸಬೇಕು.

ಒಟ್ಟಾರೆ ಜನ್ಮದಿನಾಚರಣೆ ಕಾರ್ಯಕ್ರಮವು ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ. ತುಂಬರಮಟ್ಟಿ ಮಾತನಾಡಿ, ಕಾರ್ಯಕ್ರಮದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು.

ಅಲ್ಲದೆ, ಅರಸು ಜಯಂತಿ ನಿಮಿತ್ತ ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಚನ್ನಮ್ಮ ವೃತ್ತದಿಂದ ಡಿ. ದೇವರಾಜ ಅರಸು ಅವರ ಭಾವಚಿತ್ರದೊಂದಿಗೆ ಮೆರವಣಿಗೆ ಹೊರಟು ಕನಕ ಭವನಕ್ಕೆ ತಲುಪಲಿದೆ ಎಂದು ಹೇಳಿದರು.

ಸಭೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಡಿವೈಎಸ್‌ಪಿ ಮಹಾಂತೇಶ ಸಜ್ಜನರ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರುಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ಬಳ್ಳಾರಿ ಸೇರಿದಂತೆ ಸಮಾಜದ ಗಣ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಗದಗದ ಅಭಿವೃದ್ಧಿಗೆ ಬೀದಿ ಬೀದಿಯಲ್ಲಿ GEN Z ಸೈನಿಕರು

ಮೊದಲಪುಟದಿಂದ

ಅಭಿಯಾನವು ಯಾವುದೇ ವ್ಯಕ್ತಿಯ ವಿರುದ್ಧ ವೈಯಕ್ತಿಕ ದಾಳಿ ಮಾಡುವ ಉದ್ದೇಶ ಹೊಂದಿಲ್ಲ. ಗದಗದ ಅಭಿವೃದ್ಧಿಯಲ್ಲಿ ಎಲ್ಲಿ ಕೊರತೆಯಿದೆ, ಜನರು ಎದುರಿಸುತ್ತಿರುವ ಸಮಸ್ಯೆಗಳೇನು ಹಾಗೂ ಇನ್ನೂ ಆಗಬೇಕಿರುವ ಕೆಲಸಗಳೇನು ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಜನರ ಮುಂದಿಡುವುದು ಇದರ ಉದ್ದೇಶವಾಗಿದೆ. ನಗರದ ರಸ್ತೆ, ಕುಡಿಯುವ ನೀರು, ಚರಂಡಿ, ಸ್ವಚ್ಛತೆ, ಉದ್ಯೋಗ ಹಾಗೂ ಮೂಲಸೌಕರ್ಯಗಳ ಕುರಿತು ಪ್ರಶ್ನಿಸುವುದು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕು ಎಂದು Forum ತಿಳಿಸಿದೆ. ಉತ್ತಮ ಕೆಲಸಗಳು ನಡೆದಿದ್ದರೆ ಅವುಗಳನ್ನೂ ಗುರುತಿಸುವ ಜವಾಬ್ದಾರಿಯುತ ಜನಜಾಗೃತಿ ಅಭಿಯಾನ ಇದಾಗಲಿದೆ.

### ಪ್ರತಿ ವಾರ್ಡ್‌ಗೆ GEN Z ತಂಡ

1. ಪ್ರತಿಯೊಂದು ವಾರ್ಡ್ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಯುವಕರ ತಂಡಗಳನ್ನು ರಚಿಸಲಾಗುವುದು. ತಂಡದ ನಾಯಕರ ನೇತೃತ್ವದಲ್ಲಿ ತಮ್ಮ ಪ್ರದೇಶದ ಸಮಸ್ಯೆಗಳನ್ನು ಗುರುತಿಸಿ ದಾಖಲಿಸಲಾಗುತ್ತದೆ.
2. ಒಂದು ರಸ್ತೆ ಒಂದು ಜವಾಬ್ದಾರಿ.
3. ಒಂದು ವಾರ್ಡ್ ಒಂದು ಬಲಿಷ್ಠ ಎಲುಫೆ ಫು ತಂಡ.
4. ಒಂದು ಸಮಸ್ಯೆ ಒಂದು ದಾಖಲೆ.
5. ದಾಖಲೆಯಿಂದ ಪ್ರಶ್ನೆ, ಪ್ರಶ್ನೆಯಿಂದ ಉತ್ತರ, ಉತ್ತರದಿಂದ ಅಭಿವೃದ್ಧಿ ಎಂಬ ಆಶಯದೊಂದಿಗೆ ಯುವಕರು ಕೇವಲ ಮತದಾರರಾಗಿ ಉಳಿಯದೆ, ತಮ್ಮ ನಗರದ ಅಭಿವೃದ್ಧಿಯನ್ನು ಗಮನಿಸುವ ಜಾಗೃತ ನಾಗರಿಕರಾಗಿ ಮುಂದೆ ಬರಬೇಕು ಎಂದು GEN Z Voters Citizens Forum ಆಶಿಸಿದೆ.

**GEN Z Voters Citizens Forum**

ಕರ್ನಾಟಕ ಸರಕಾರ

**ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ 582101**

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ

ದೂರವಾಣಿ: 08372-259932 ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2026-27 ದಿನಾಂಕ: 13-08-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000 ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನ ಒಟ್ಟು **04** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ **ಮೊತ್ತ ರೂ.25.46 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್‌ನಂ:- 1) DMA/2026-27/OW/WORK_INDENT-61597, 2) DMA/2026-27/OW/WORK_INDENT-61606, 3) DMA/2026-27/OW/WORK_INDENT-61598, 4) DMA/2026-27/OW/WORK_INDENT-61602.** http://kppp.karnataka.gv.in ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

| | |
|---|---|
| ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ | **24-08-2026 Upto 16.00 hours** |
| ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids) | **25-08-2026 Upto 16.30 hours** |

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

**ಸಹಿ/-**
**ಪೌರಾಯುಕ್ತರು**
**ಗದಗ-ಬೆಟಗೇರಿ ನಗರಸಭೆ**

ವಾ.ಸಾ.ಇ./ಗದಗ/205/ದೇಶಪಾಂಡೆಪಬ್ಲಿಸಿಟಿ/2026-27








**ಶ್ರೀ ಡಿ ಕೆ ಶಿವಕುಮಾರ್**
ಸನ್ಮಾನ್ಯ ಮುಖ್ಯಮಂತ್ರಿಗಳು







**ಡಾ. ಜಿ. ಪರಮೇಶ್ವರ**
ಮಾನ್ಯ ಉಪಮುಖ್ಯಮಂತ್ರಿಗಳು

ನಾಡಿನ ಸಮಸ್ತ ಜನತೆಗೆ

# 80ನೇ ಸ್ವಾತಂತ್ರ್ಯ ದಿನಾಚರಣೆಯ

ಶುಭಾಶಯಗಳು



# ಯುವ ಕರ್ನಾಟಕ ನವ ಭಾರತ

ಇಂದು ನಮಗೆ ನಿಜವಾದ '**ಸ್ವಾತಂತ್ರ್ಯ**' ಎಂದರೆ ಯುವಜನತೆ ಹೊಸ ಕನಸುಗಳನ್ನು ಕಾಣುವ ಅವಕಾಶ, ಹಸಿವಿನಿಂದ ಮುಕ್ತಿ, ಆರ್ಥಿಕ ಆತಂಕವಿಲ್ಲದ ನೆಮ್ಮದಿ, ಮಹಿಳೆಯರ ಬದುಕಿನಲ್ಲಿ ಆತ್ಮವಿಶ್ವಾಸ, ಹಾಗೂ ಪ್ರತಿಯೊಬ್ಬರಿಗೂ ಸಿಗುವ ಗೌರವಯುತ ಬದುಕು. ಇದನ್ನು ಸಾಕಾರಗೊಳಿಸುತ್ತಿರುವ **ಐದು ಗ್ಯಾರಂಟಿ ಯೋಜನೆಗಳು** ಪ್ರತಿಯೊಬ್ಬರ ಜೀವನಕ್ಕೂ ಹೊಸ ಆಶಾಕಿರಣವಾಗಿವೆ.

**ಮಹಾತ್ಮ ಗಾಂಧೀಜಿ**ಯವರ '**ಅಂತ್ಯೋದಯ**' ಹಾಗೂ '**ಸರ್ವೋದಯ**' ತತ್ವಗಳು ಮತ್ತು **ಡಾ. ಬಿ. ಆರ್. ಅಂಬೇಡ್ಕರ್** ಅವರ **ಸಾಂವಿಧಾನಿಕ ಮೌಲ್ಯ**ಗಳ ದಾರಿಯಲ್ಲಿ ಹೆಜ್ಜೆಯಿಡುತ್ತಿರುವ ನಾವು, ಯುವಜನತೆಯ ಶಕ್ತಿಯೊಂದಿಗೆ '**ಯುವ ಕರ್ನಾಟಕ, ನವ ಭಾರತ**'ಕ್ಕಾಗಿ **ಕರ್ನಾಟಕ ಅಭಿವೃದ್ಧಿ ಮಾದರಿ**ಯನ್ನು ನಿರ್ಮಿಸುತ್ತಿದ್ದೇವೆ.

**ಕನ್ನಡಿಗರ ಸಬಲೀಕರಣವೇ ನಮ್ಮ ದೃಢ ಸಂಕಲ್ಪ, ಅದುವೇ ನಮಗೆ ನಿಜ ಸ್ವಾತಂತ್ರ್ಯ.**



ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

ಸ್ಕ್ಯಾನ್ ಮಾಡಿ,
ಸ್ವಾತಂತ್ರ್ಯದ ಸಂದೇಶ ಕೇಳಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka https://dipr.karnataka.gov.in/ Karnatakavarthe ಕರ್ನಾಟಕ ವಾರ್ತೆ

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka